# ಸಮಯದ ಬೆಲೆ

ಮಾರ್ಟಿನನ ತಂದೆ ತುಂಬ ಪ್ರಸಿದ್ಧ ವಕೀಲನಾಗಿದ್ದ. ಅವನಿಗೆ ಯಾವಾಗಲೂ ಕೆಲಸವೇ. ಅವನು ಉತ್ತಮ ತಂದೆಯಾಗಿದ್ದರೂ ತನ್ನ ಮಕ್ಕಳಿಗಾಗಿ ಸ್ವಲ್ಪ ಸಮಯವನ್ನು ವಿನಿಯೋಗಿಸಲೂ ಅವನಿಗೆ ಸಾಧ್ಯವೇ ಆಗುತ್ತಿರಲಿಲ್ಲ.

ಮಾರ್ಟಿನ್ ಹತ್ತು ವರ್ಷದ ಹುಡುಗ. ಅವನು ತಂದೆಯ ಪ್ರೀತಿಯನ್ನು ಬಹಳವಾಗಿ ಬಯಸುತ್ತಿದ್ದ. ಒಂದು ದಿನ ಅವನು ತಂದೆಯನ್ನು ಕೇಳಿದ : "ಅಪ್ಪ, ಒಬ್ಬ ಉತ್ತಮ ವಕೀಲರ ಒಂದು ಗಂಟೆಯ ಸಂಪಾದನೆ ಎಷ್ಟು?" ತಂದೆಗೆ ಈ ಪ್ರಶ್ನೆ ರುಚಿಸಲಿಲ್ಲ. ಅವನು ವಿಷಯವನ್ನು ಬೇರೆಡೆಗೆ ತಿರುಗಿಸಲು ಪ್ರಯತ್ನಿಸಿದ. ಆದರೆ ಮಾರ್ಟಿನ್ ಬಿಡಲಿಲ್ಲ, ಮತ್ತೆ ಮತ್ತೆ ಅದೇ ಪ್ರಶ್ನೆಯನ್ನು ಕೇಳಿದ. ಕೊನೆಗೆ ತಂದೆ ಅನಿವಾರ್ಯವಾಗಿ, "ನೋಡಪ್ಪ, ನಾನು ಒಂದು ಗಂಟೆಗೆ ೨೦೦ ಡಾಲರ್ ಚಾರ್ಜ್ ಮಾಡುತ್ತೇನೆ" ಎಂದು ಸ್ವಲ್ಪ ಸಂಕೋಚದಿಂದಲೇ ಹೇಳಿದ.

ಮಾರ್ಟಿನ್‌ಗೆ ಆಶ್ಚರ್ಯವಾಯಿತು—ಒಂದು ಗಂಟೆಗೆ ಇಷ್ಟೊಂದು ಹಣವೇ ಎಂದು. ಸ್ವಲ್ಪ ನಿರಾಸೆಯ ಛಾಯೆ ಅವನ ಮುಖದ ಮೇಲೆ ಮೂಡಿತು. ಸ್ವಲ್ಪ ಹೊತ್ತು ಆಲೋಚಿಸಿ ಅಳುಕುತ್ತ ಅಳುಕುತ್ತ ಅವನು ಮತ್ತೆ ಕೇಳಿದ: "ಅಪ್ಪ, ನನಗೆ ೧೨೫ ಡಾಲರ್ ಸಾಲ ಕೊಡುತ್ತೀಯಾ?" ಈಗ ತಂದೆಗೆ ತುಂಬ ಕೋಪ ಬಂತು. "ಇಲ್ಲ, ಹೋಗಿ ಮಲಗಿಕೊ" ಎಂದು ಗಡುಸಾಗಿ ನುಡಿದ. ಮಾರ್ಟಿನ್ ತನ್ನ ದುಃಖವನ್ನು ಅದುಮಿಕೊಂಡು ತನ್ನ ಕೊಠಡಿಗೆ ಓಡಿದ.

ತಂದೆಗೆ ಈಗ ಬೇಸರವಾಯಿತು—ಮಗನ ಮನಸ್ಸನ್ನು ನೋಯಿಸಿದೆನಲ್ಲ ಎಂದು. ಅವನು ಮಾರ್ಟಿನ್‌ನ ಕೊಠಡಿಗೆ ಹೋದ. ಮಗ ಬಿಕ್ಕಳಿಸಿ ಅಳುತ್ತಿದ್ದ. "ಮಗು, ನೀನು ಎಂದೂ ಹಣವನ್ನು ಕೇಳಿದವನೇ ಅಲ್ಲ. ಈಗ ನೀನು ಕೇಳುತ್ತಿರುವುದರಲ್ಲಿ ಏನೊ ವಿಶೇಷವಿರಬೇಕು. ಏಕೆ ನಿನಗೆ ಹಣ ಬೇಕು ಹೇಳು?" ಎಂದು ಪ್ರೀತಿಯಿಂದ ವಿಚಾರಿಸಿದ.

ಹುಡುಗನ ಮುಖ ಅರಳಿತು. ಅವನು ಹೇಳಿದ : "ನಾನು ೭೫ ಡಾಲರ್ ಹೇಗೊ ಕೂಡಿಹಾಕಿದ್ದೇನೆ. ನೀನು ೧೨೫ ಡಾಲರ್ ಕೊಟ್ಟರೆ ಸಾಕು."

"ಯಾವುದಕ್ಕೆ ಸಾಕು?" ತಂದೆ ಕೇಳಿದ.

"ಅಪ್ಪ, ನಿನ್ನ ಸಮಯದಲ್ಲಿ ಒಂದು ಗಂಟೆ ನನಗೆ ಕೊಡುತ್ತೀಯ? ನಾವು ಎಲ್ಲ ಸ್ನೇಹಿತರು ಒಂದು ಪಾರ್ಟಿ ಏರ್ಪಡಿಸಿದ್ದೇವೆ. ನೀನು ಅದಕ್ಕೆ ಬರಬೇಕು."

ಆಗ ತಂದೆಗೆ ಅರ್ಥವಾಯಿತು—ಮಕ್ಕಳು ತಂದೆತಾಯಿಗಳ ಪ್ರೀತಿ ಮತ್ತು ಸಮಯವನ್ನು ಎಷ್ಟೊಂದು ಬಯಸುತ್ತಾರೆ ಎಂದು. ದುಡಿಮೆಯ ಸಡಗರದಲ್ಲಿ, ತೀರಿಸಲಾಗದ ಧನದಾಸೆಯ ಒತ್ತಡದಲ್ಲಿ ತಂದೆತಾಯಿಗಳು ಮಕ್ಕಳ ಆವಶ್ಯಕತೆಯನ್ನು ಚಿಂತಿಸುವುದೇ ಇಲ್ಲ. ಅವರಿಗೆ ತಮ್ಮ ಸಮಯ ಮತ್ತು ಪ್ರೀತಿಯನ್ನು ನೀಡಿ ಉತ್ತಮ ವಾತಾವರಣದಲ್ಲಿ ಅವರನ್ನು ಬೆಳೆಸಬೇಕು ಎಂಬುದರ ಕಡೆ ಗಮನ ಹರಿಸುವಷ್ಟು ಸಮಯ ಮತ್ತು ತಾಳ್ಮೆ ಅವರಿಗಿರುವುದಿಲ್ಲ. ಈ ಕೊರತೆಯನ್ನು ಹೋಗಲಾಡಿಸುವುದು ಅತ್ಯಂತ ಆವಶ್ಯಕ.

(ಆಧಾರ : ಮೈಕೇಲ್ ಜೋಸೆಫ್‌ಸನ್‌ರವರ *You Don't Have to Be Sick to Get Better* ಎಂಬ ಗ್ರಂಥ.)

## ಓದುಗರ ಸ್ಪಂದನ

### ಮಕ್ಕಳ ಜೀವನವನ್ನು ರೂಪಿಸುವುದರಲ್ಲಿ ತಂದೆತಾಯಿಯರ ಪಾತ್ರ

ನಾವು ಜೇನು ಸಾಕಾಣಿಕೆ, ಕೋಳಿಸಾಕಾಣಿಕೆ ಮುಂತಾದ ವಿಷಯಗಳನ್ನು ಸಾಕಷ್ಟು ತಿಳಿದಿರುತ್ತೇವೆ, ಅದಕ್ಕಾಗಿ ಬಹಳಷ್ಟು ತರಬೇತಿ ಕೇಂದ್ರಗಳೂ ಇವೆ. ಆದರೆ ನಮ್ಮ ಮಕ್ಕಳನ್ನು ಹೇಗೆ ಸಾಕಬೇಕೆಂಬುದೇ ನಮಗೆ ತಿಳಿಯದು. ಇಂದಿನ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಶಿಶುವಿಹಾರ ಮುಂತಾದುವುಗಳಿಗೆ ಕಳಿಸಿ ತಮ್ಮ ಜವಾಬ್ದಾರಿ ಮುಗಿಯಿತೆಂದು ಭಾವಿಸುತ್ತಾರೆ. ಈ ಧೋರಣೆ ಸರಿಯಾದುದಲ್ಲ. ಮಕ್ಕಳ ವಿಷಯದಲ್ಲಿ ತಂದೆ ತಾಯಿಗಳ ಜವಾಬ್ದಾರಿ ಅತ್ಯಂತ ಗುರುತರವಾದುದು.

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನಾವು ಓದುಗರಿಂದ ಕಿರುಲೇಖನವನ್ನು ಆಹ್ವಾನಿಸುತ್ತೇವೆ. ಲೇಖನವು ವಿವೇಕ ಪ್ರಭ ದ ಅರ್ಧಪುಟದ ಮಿತಿಯೊಳಗಿರಬೇಕು, ಅಥವಾ ೨೦೦ ಪದಗಳ ಒಳಗೆ ಇರಬೇಕು.

ಲೇಖನವನ್ನು ಅಕ್ಟೋಬರ್ ೩೦ರೊಳಗೆ ನಮಗೆ ತಲಪುವಂತೆ ಈ ಕೆಳಗಿನ ವಿಳಾಸಕ್ಕೆ ಕಳಿಸಿ:

**ಸಂಪಾದಕರು**
**"ಓದುಗರ ಸ್ಪಂದನ"**
**ವಿವೇಕಪ್ರಭ ವಿಭಾಗ**
**ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ**
**ಮೈಸೂರು ೫೭೦ ೦೨೦**

ಸ್ಥಳದಾನ : ಆರ್.ವಿ. ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು